# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Addl.Dir/JD North/LP/0060/2014-15 ದಿನಾಂಕ: 12-09-2019.

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ನಂ. CC/427/19-20 ದಿನಾಂಕ. 18/9/19 ಬೃಹತ್ ಬೆಂಗಳೂರು

## ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಖಾತಾ ಸಂಖ್ಯೆ. 207, ಸರ್ವೆ ನಂ. 88, ಮುನ್ನೇಕೊಳಲು ಗ್ರಾಮ, ವರ್ತೂರು ಹೋಬಳಿ, ವಾರ್ಡ್ ನಂ. 150, ಮಹದೇವಪುರ ವಲಯ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ವಾಣಿಜ್ಯ (ಕಛೇರಿ) ಉಪಯೋಗದ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ಪ್ರಾರಂಭಿಕ ಪ್ರಮಾಣಪತ್ರ ಕೋರಲಾದ ತಮ್ಮ ಮನವಿ ಪತ್ರ ದಿನಾಂಕ: 19-01-2018.
2) ಪರಿಷ್ಕೃತ ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD North/LP/0060/2014-15, ದಿನಾಂಕ: 22-01-2016.

* * * * * * *

ಆಸ್ತಿ ಖಾತಾ ಸಂಖ್ಯೆ. 207, ಸರ್ವೆ ನಂ. 88, ಮುನ್ನೇಕೊಳಲು ಗ್ರಾಮ, ವರ್ತೂರು ಹೋಬಳಿ, ವಾರ್ಡ್ ನಂ. 150, ಮಹದೇವಪುರ ವಲಯ, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ 2ತಳ + ನೆಲ + ಮೇಲಿನ 6 ಅಂತಸ್ತುಗಳ ವಾಣಿಜ್ಯ (ಕಛೇರಿ) ಉಪಯೋಗದ ಕಟ್ಟಡ ನಿರ್ಮಾಣಕ್ಕೆ ಉಲ್ಲೇಖ (2) ರಂತೆ ಈ ಕಛೇರಿಯಿಂದ ದಿನಾಂಕ: 22-01-2016 ರಂದು ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಸದರಿ ವಾಣಿಜ್ಯ (ಕಛೇರಿ) ಉಪಯೋಗದ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (1) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ ಕಟ್ಟಡ ನಿರ್ಮಾಣದ ಸ್ಥಳವನ್ನು ದಿನಾಂಕ: 22-07-2019 ರಂದು ಪರಿಶೀಲಿಸಲಾಗಿದ್ದು, ಮಂಜೂರಾತಿ ನಕ್ಷೆಯಂತೆ ಅಗತ್ಯ ನಡುಜಾಗಗಳನ್ನು ಬಿಟ್ಟು ಕಟ್ಟಡದ ಕಾಮಗಾರಿಯು ಪ್ರಗತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 26-08-2019 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ಶುಲ್ಕ ಹಾಗೂ ಕೆರೆ ಪುನರುಜ್ಜೀವನ ಶುಲ್ಕ ಸೇರಿ ಒಟ್ಟು **ರೂ. 5,51,000/-** ಗಳಿಗೆ ಡಿ.ಡಿಯನ್ನು ಸಲ್ಲಿಸಿದ್ದು, ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/000284 ದಿನಾಂಕ: 11-09-2019 ರಲ್ಲಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಸಂದಾಯ ಮಾಡಿಕೊಳ್ಳಲಾಗಿದೆ. ಆದುದರಿಂದ ಉಲ್ಲೇಖ (2) ರಲ್ಲಿ ನಕ್ಷೆ ಮಂಜೂರಾತಿ ನೀಡಲಾದ ವಸತಿ ಸಮುಚ್ಚಯ ಉಪಯೋಗದ ಕಟ್ಟಡ ನಿರ್ಮಾಣಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**ಷರತ್ತುಗಳು**

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

3. ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5. ವಿವಿಧ ಇಲಾಖೆಗಳಿಂದ ನೀಡಿರುವ ನಿರಾಕ್ಷೇಪಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತನ್ನು ಪಾಲಿಸತಕ್ಕದ್ದು.

ಸಹಿ /-

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

ಶ್ರೀ.ಆರ್.ರವಿಕುಮಾರ್ ಮತ್ತು ಇತರರು,
# 207, ಸರ್ವೆ ನಂ. 88, ಮುನ್ನೆಕೊಳಲು ಗ್ರಾಮ,
ವರ್ತೂರು ಹೋಬಳಿ, ವಾರ್ಡ್ ಸಂಖ್ಯೆ: 150,
ಮಹದೇವಪುರ ವಲಯ, ಬೆಂಗಳೂರು.

ಪ್ರತಿಯನ್ನು:

1. ಕಾರ್ಯಪಾಲಕ ಅಭಿಯಂತರರು (ಮಹದೇವಪುರ ವಿಭಾಗ) / ಸಹಾಯಕ ಕಾರ್ಯಪಾಲಕ ಅಭಿಯಂತರರು (ಮಾರತ್‌ಹಳ್ಳಿ ಉಪ-ವಿಭಾಗ) ರವರಿಗೆ ಮಾಹಿತಿಗಾಗಿ.
2. ಕಛೇರಿ ಪ್ರತಿ.

SU 16/9/19

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

11/9/19 11/09/19 11/9